ಲೋಕದ ಡ್ರಗ್ಸ್ ಜಾಲ ಪೂರ್ತಿ ಬಯಲಿಗೆ ಬರುತ್ತದೆಯೇ? ಖಂಡಿತ ಇಲ್ಲ ಎನ್ನುತ್ತಾರೆ ಬಲ್ಲವರು.

'ಈಗ ಸಿಕ್ಕಿಬಿದ್ದಿರುವುದು ಒಂದು ಜಾಲವಷ್ಟೆ. ಇಂಥ ಕನಿಷ್ಠ ಹನ್ನೆರಡು ಜಾಲಗಳು ರಾಜ್ಯದಲ್ಲಿ ಸಕ್ರಿಯವಾಗಿವೆ. ಅವೆಲ್ಲ ಜಾಲಗಳಿಗೂ ಸ್ಯಾಂಡಲ್‌ವುಡ್‌ನ ಹಲವು ಖ್ಯಾತ ಕಲಾವಿದರು, ನಿರ್ದೇಶಕರು, ತಂತ್ರಜ್ಞರೆಲ್ಲರೂ ಗಿರಾಕಿಗಳಾಗಿದ್ದಾರೆ. ಹಾಗಾಗಿ ಈ ಗಿಡವನ್ನು ಕಿತ್ತರೆ ಇದರ ಬೇರುಗಳು ಹೊರಗೆ ಬರಬಹುದಷ್ಟೆ. ಆದರೆ ಸಮಸ್ಯೆ ಖಂಡಿತ ಮುಗಿಯುವುದಿಲ್ಲ. ಇಂಥ ಹಲವು ಹೆಮ್ಮರಗಳೇ ಅಲ್ಲಿ ಬಲವಾಗಿ ಬೇರೂರಿವೆ' ಎನ್ನುತ್ತಾರೆ ಡ್ರಗ್ಸ್ ದಂಧೆಯ ಕುರಿತು ಹಲವು ವರ್ಷಗಳಿಂದ ವರದಿ ಮಾಡುತ್ತಿರುವ ಪತ್ರಕರ್ತರೊಬ್ಬರು.

'ಕೆಲವರು ಸಾಚಾತನದ ಮುಖವಾಡ ತೊಟ್ಟ ಡ್ರಗ್ಸ್ ಮಾಫಿಯಾ ಬಗ್ಗೆ ಏನೋ ದೊಡ್ಡ ಸುಳಿವು ಬಿಟ್ಟುಕೊಡುವವರ ಹಾಗೆ ಮಾತಾಡುತ್ತಿರುವುದರ ಹಿಂದೆ ಇರುವ ಗುಟ್ಟೂ ಇದೇ. ಹಾಗೆ ಮಾತಾಡುತ್ತಿರುವವರಲ್ಲಿ ಹಲವರು ಸ್ವತಃ ಮಾದಕ ವ್ಯಸನಕ್ಕೆ ದಾಸರಾಗಿದ್ದಾರೆ ಮತ್ತು ಇಂಥದ್ದೇ ಇನ್ನೊಂದು ಜಾಲದಲ್ಲಿಯೂ ಸಕ್ರಿಯರಾಗಿದ್ದಾರೆ' ಎಂಬುದು ಅವರ ಮಾತು.

ಗಾಂಧಿನಗರದ ಡ್ರಗ್ ಜಾಲವೊಂದರ ಮುಖ್ಯ ಕೊಂಡಿಯಾಗಿ ಖ್ಯಾತ ನಿರ್ದೇಶಕರೊಬ್ಬರ ಮಗನೇ ಇದ್ದಾನೆ ಎಂದು ಚಿತ್ರೋದ್ಯಮದ ಅನೇಕರು ಆಫ್ ದಿ ರೆಕಾರ್ಡ್ ಹೇಳುತ್ತಾರೆ.

## ಪ್ರಭಾವಿಗಳ ನೆರಳು

'ಸಾಮಾನ್ಯವಾಗಿ ಇಂಥ ದುಬಾರಿ ವ್ಯಸನಕ್ಕೆ ಬಲಿಯಾಗುವವರು ಪ್ರಭಾವಿಗಳು, ಅವರ ಮಕ್ಕಳೇ ಆಗಿರುತ್ತಾರೆ. ಹಾಗಾಗಿ ಪ್ರಕರಣಗಳು ಶುರುವಾದಷ್ಟೇ ಬೇಗ ಮುಗಿದು ಹೋಗುತ್ತದೆ' ಎಂದು ಹೇಳುವ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿರುವ ವ್ಯಕ್ತಿಯೊಬ್ಬರು, ತಮ್ಮ ಮಾತಿಗೆ ಉದಾಹರಣೆಯನ್ನೂ ಕೊಡುತ್ತಾರೆ.

ಕಳೆದ ವರ್ಷ ರಾಜಕಾರಣಿಯ ಮಗನೊಬ್ಬ ಬಾರ್‌ನಲ್ಲಿ ಹಲ್ಲೆ ಮಾಡಿದ್ದು ವರದಿಯಾಗಿತ್ತು. ಅದು ಕೊನೆಗೆ ಪ್ರಭಾವಿ ವ್ಯಕ್ತಿಯೊಬ್ಬರ ಮಗನ ದುರಹಂಕಾರದ ಹಲ್ಲೆಯ ಪ್ರಕರಣ ಎಂಬಂತೆ ಬಿಂಬಿತವಾಗಿ ಮುಗಿದುಹೋಯಿತು. ಆದರೆ ಈ ಪ್ರಕರಣದ ಮೂಲದಲ್ಲಿಯೂ ಡ್ರಗ್ಸ್ ಮಾಫಿಯಾದ ಕರಿನೆರಳಿದೆ ಎನ್ನುತ್ತಾರೆ ಅವರು.

ಡ್ರಗ್ಸ್ ಮಾಫಿಯಾ ನಿಂತಿರುವುದೇ ತಂತ್ರಜ್ಞಾನದ ಬಲದಿಂದ. ಅಂತರರಾಷ್ಟ್ರೀಯ ಮಟ್ಟದಲ್ಲಿ ಅದರ ವ್ಯವಹಾರಗಳು ನಡೆಯುವುದೂ ತಂತ್ರಜ್ಞಾನ ವಾಹಿನಿಯ ಮೂಲಕವೇ. ಹಾಗಾಗಿ ಈ ಜಾಲ ಸುಲಲಿತವಾಗಿ ನಡೆಯಲು ತಂತ್ರಜ್ಞರೂ ಬೇಕು. ಅಂಥ ಒಬ್ಬ ಪ್ರಚಂಡ ತಂತ್ರಜ್ಞನ ಹೆಸರು ಕೃಷ್ಣ (ಹೆಸರು ಬದಲಿಸಲಾಗಿದೆ). ಮೇಲೆ ಉಲ್ಲೇಖಿಸಿದ ರಾಜಕಾರಣಿ ಪುತ್ರನ ಹಲ್ಲೆ ಪ್ರಕರಣ ನಡೆದಿದ್ದೂ ಈ ವ್ಯಕ್ತಿಯ ಕಾರಣಕ್ಕಾಗಿಯೇ! ಸ್ವತಃ ಮಾದಕ ಪದಾರ್ಥದ ದಾಸನಾಗಿರುವ ಕೃಷ್ಣ ಒಂದು ದಿನ ಮುಂಬೈ, ಇನ್ನೊಂದು ದಿನ ಬೆಂಗಳೂರು, ಮತ್ತೊಮ್ಮೆ ದೆಹಲಿ ಹೀಗೆ ಎಲ್ಲೆಲ್ಲಿಯೋ ಪ್ರತಿಷ್ಠಿತ ಹೋಟೆಲುಗಳಲ್ಲಿ ಉಳಿದುಕೊಳ್ಳುತ್ತಾನೆ. ಮಾದಕ ಪದಾರ್ಥ ತೆಗೆದುಕೊಳ್ಳದಿರುವ ಸಮಯದಲ್ಲಿ ತನ್ನ ದೇಹದ ಭಾರವನ್ನೇ ಹೊರಲಾರದಷ್ಟು ನಿಶ್ಶಕ್ತಿಯಿಂದಿರುವ ಅವನು ಕಿಕ್ಕು ಏರಿದ ಕೂಡಲೇ ಪಕ್ಕಾ ಸೈಬರ್ ಕ್ರಿಮಿನಲ್ ಆಗಿ ಬದಲಾಗುತ್ತಾನೆ. ತನ್ನ ಬಳಿ ಯಾವ ಸಾಕ್ಷ್ಯಗಳನ್ನೂ ಉಳಿಸಿಕೊಳ್ಳದ ಆತ ಯಾವುದೋ ರಸ್ತೆಪಕ್ಕದ ಸೈಬರ್‌ಗೆ ತೆರಳಿ ತನ್ನ ಕೆಲಸ ಮುಗಿಸಿಕೊಂಡು ಹೊರಡುತ್ತಿರುತ್ತಾನೆ. ಈ ವ್ಯಕ್ತಿಗೂ ಮೇಲೆ ಉಲ್ಲೇಖಿಸಿದ ರಾಜಕಾರಣಿ ಮಗ ಇಬ್ಬರೂ ಆಪ್ತರು. ಅಷ್ಟೇ ಅಲ್ಲ, ಆ ರಾಜಕಾರಣಿ ಮಗನಿಗೆ ಕನ್ನಡ ಚಿತ್ರರಂಗದ ಗಡಿಯನ್ನೂ ಮೀರಿ ಯಶಸ್ಸು ಗಳಿಸಿದ ಪ್ರಖ್ಯಾತಗೊಂಡ ಸ್ಟಾರ್ ನಟನೂ ಸೇರಿದಂತೆ ಹಲವರ ಜೊತೆ ನಿಕಟ ಸಂಪರ್ಕವಿದೆ.

'ಹೀಗೆ ಡ್ರಗ್ಸ್ ಜಾಲ ಚಿತ್ರರಂಗದಲ್ಲಿ ತಲೆಯೆತ್ತಿದ್ದರೂ ಅದರ ಕಾಲು ಬಾಲಗಳು ರಾಜಕೀಯದಲ್ಲಿಯೂ, ಸರ್ಕಾರಿ ವ್ಯವಸ್ಥೆಯಲ್ಲಿಯೂ ಚಾಚಿಕೊಂಡಿವೆ' ಎನ್ನುತ್ತಾರೆ ಮಾಜಿ ಪೊಲೀಸ್ ಅಧಿಕಾರಿ.

ಚಂದನವನದ ಹಲವು ನಟರು ಈ ಮಾದಕ ಪದಾರ್ಥದ ದಾಸರಾಗಿದ್ದಾರೆ. ಆದರೆ ಅವರು ಯಾವ ಡ್ರಗ್ ಪೆಡ್ಲರ್ ಜೊತೆಗೂ ನೇರ ಸಂಪರ್ಕ ಇರಿಸಿಕೊಂಡಿರುವುದಿಲ್ಲ. ಅವರ ಡ್ರೈವರ್ ಅಥವಾ ಸೆಕ್ಯೂರಿಟಿ ಗಾರ್ಡ್‌ಗಳೇ ಅವರಿಗೆ ಡ್ರಗ್ಸ್ ತಲುಪಿಸುವ ಕೊಂಡಿಗಳಾಗಿ ಕೆಲಸ ಮಾಡುತ್ತಿರುತ್ತಾರೆ. ಹಾಗಾಗಿ ಸಿಕ್ಕಿಬಿದ್ದರೂ ಅದು ಅವರ ಮಟ್ಟದಲ್ಲಿಯೇ ಮುಗಿದುಹೋಗುತ್ತದೆ.

ಸಾಮಾನ್ಯವಾಗಿ ಮಾತ್ರೆಗಳ ರೂಪದಲ್ಲಿರುವ ಈ ಮಾದಕ ಪದಾರ್ಥಗಳು ತುಂಬಾ ದುಬಾರಿ. ಒಂದು ಮಾತ್ರೆಗೆ ಒಂದೂವರೆಯಿಂದ ಎರಡು ಸಾವಿರ ರೂಪಾಯಿ ಕನಿಷ್ಠ ದರ ಇರುತ್ತದೆ. ಹತ್ತಿಪ್ಪತ್ತು ಸಾವಿರ ರೂಪಾಯಿಗಳನ್ನು ತೆತ್ತು ಮಾತ್ರೆಗಳನ್ನು ತೆಗೆದುಕೊಳ್ಳುವವರೂ ಇದ್ದಾರೆ. ತುಂಬ ಜನರು ಇದರಿಂದ ತಪ್ಪಿಸಿಕೊಳ್ಳಲಿಕ್ಕಾಗಿಯೇ ಮಾನಸಿಕ ತಜ್ಞರ ಬಳಿಗೆ ಹೋಗಿ ಬರುವುದೂ ಇದೆ. ಆದರೆ ಒಮ್ಮೆ ಇದರ ಪಾಶಕ್ಕೆ ಸಿಲುಕಿದ ಮೇಲೆ ತಪ್ಪಿಸಿಕೊಳ್ಳುವುದು ಕಷ್ಟವೇ.

## ಅಡ್ಡಪರಿಣಾಮಗಳು

ಅನಿಕಾ ಬಂಧನ ಎನ್ನುವುದು ಸ್ಯಾಂಡಲ್‌ವುಡ್‌ನಲ್ಲಿ ದೊಡ್ಡ ಸಂಚಲನವನ್ನೇ

